( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.168/2020

ದಿನಾಂಕಃ 19-06-2023, ಪಿ ಡಬ್ಲ್ಯೂ–1

ಪಾಟೀ ಸವಾಲು ಃ ಶ್ರೀ ಹೆಚ್ ಆರ್ ಎನ್ ವಕೀಲರಿಂದಃ

ನಾನು ಪಿ ಚಾಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಪಿ ಚಾಕನಹಳ್ಳಿ ಗ್ರಾಮದ ಒಳಗೆ ವಾಸವಾಗಿದ್ದೇನೆ. ನಾನು ವಾಸವಾಗಿರುವ ಮನೆ ಸರ್ವೆ ನಂಬರ್‌ನಲ್ಲಿದೆ. ನಾನು ವಾಸ ಮಾಡುತ್ತಿರುವ ಮನೆಗೂ ಗ್ರಾಮಠಾಣಾ ಕ್ಕೂ 100 ಮೀ ಅಂತರ ಇದೆ. ನಾನು ವಾಸ ಮಾಡುತಿರುವ ಜಾಗದ ಸುತ್ತ ಮುತ್ತ 6 ಮನೆಗಳಿವೆ. ಸದರಿ ಮನೆಗಳು ಕಾಳೇಗೌಡ, ರಾಜೇಗೌಡ, ಬಸವೇಗೌಡ, ರುದ್ರೇಗೌಡ, ದೇವೇಗೌಡ ರವರಿಗೆ ಸೇರಿದ್ದಾಗಿದೆ.

ನನ್ನ ಮನೆ ಸರ್ವೆ ನಂ 24/1 ಈಗ ಹೊಸ ಸರ್ವೆ ನಂಬರ್ ಆಗಿ 24/7 ರಲ್ಲಿ ಇದೆ. ಸರ್ವೆ ನಂ. 24/7 ರಲ್ಲಿ ಎರಡು ಮನೆ ಇದೆ. ಸದರಿ ಎರಡು ಮನೆಗಳ ಪೈಕಿ ನನ್ನ ಮನೆ ಹಾಗೂ ಕಾಳೇಗೌಡರ ಮನೆ ಇದೆ. ಕಾಳೇಗೌಡ ನನ್ನ ತಂದೆಯ ಅಣ್ಣನ ಮಗ. ಸದರಿ ಕಾಳೇಗೌಡರು 40 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಸದರಿ ಕಾಳೇಗೌಡರು ಮೃತರಾದ ನಂತರ ಆ ಮನೆಯಲ್ಲಿ ಪ್ರತಿವಾದಿ ಸ್ವಾಮಿಗೌಡರು ವಾಸ ಮಾಡುತ್ತಿದ್ದಾರೆ.

ಸರ್ವೆ ನಂ. 24/7 ರಲ್ಲಿರುವ ಎರಡು ಮನೆಗಳು ಮಂಗಳೂರು ಹೆಂಚಿನ ಮನೆ ಎಂದರೆ ಸರಿ. ಸದರಿ ಎರಡು ಮನೆಗಳನ್ನು ಹೊರತುಪಡಿಸಿ ಮೇಲೆ ಹೇಳಿದ ಬೇರೆ ಮನೆಗಳು ಸರ್ವೆ ನಂ. 24/7 ರಲ್ಲಿ ಇಲ್ಲ ಎಂದರೆ ಸರಿ. ನಾನು ದಾವೆ ಹೂಡುವ ಸಂದರ್ಬದಲ್ಲಿ ಸರ್ವೆ ನಂಬರ್ 24/7 ರಲ್ಲಿ ಮನೆ ಇದೆ ಎಂದು ಚೆಕ್ಕುಬಂದಿ ಹೇಳಿ ಬರೆಸಿರುತ್ತೇನೆ.

ನಾನು ಮತ್ತು ಪ್ರತಿವಾದಿ ದಾಯಾದಿಗಳು. ನಾನು ಮತ್ತು ಪ್ರತಿವಾದಿ ದಾಯದಿಗಳು ಎನ್ನುವುದಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ಸ್ವಾ ಮಿಗೌಡರ ತಂದೆ ಕಾಳೇಗೌಡರಿಗೆ ನಾನು ಚಿಕ್ಕಪ್ಪನ (ತಮ್ಮನ) ಮಗ.

ಸರ್ವೆ ನಂ.24/7 ರ ಜಮೀನು ಮುಂಚೆ ಸರ್ವೆ ನಂ. 24 ಎಂದು ಇತ್ತು ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ 5 ಎಕರೆ 11 ಗುಂಟೆ ಜಮೀನು ಇತ್ತು ಎಂದರೆ ಸರಿ. ದಿಃ 18-05-1951 ರಲ್ಲಿ 5 ಎಕರೆ 11 ಗುಂಟೆ ಜಮೀನಿನ ಪೈಕಿ 1 ಎಕರೆ 12 ಗುಂಟೆ ಜಮೀನನ್ನು ಪಟೇಲ್ ಚನ್ನೇಗೌಡರಿಂದ ಪ್ರತಿವಾದಿಯ ತಂದೆ ಖರೀದಿಸಿದ ಆಸ್ತಿ ಎಂದರೆ ಸಾಕ್ಷಿಯು ನನ್ನ ತಂದೆ ಹಾಗೂ ಪ್ರತಿವಾದಿಯ ತಂದೆ ಒಟ್ಟಿಗೆ ಖರೀದಿಸಿದ ಆಸ್ತಿ ಎಂದು ನುಡಿಯುತ್ತಾರೆ.

ಪ್ರತಿವಾದಿಯ ತಂದೆ ಖರೀದಿಸಿದ ನಂತರ ಅವರ ಜೀವಿತ ಅವಧಿಯವರೆಗೂ ಹಕ್ಕು ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿಯು ನಾನು ಮತ್ತು ಪ್ರತಿವಾದಿ ಹಕ್ಕು ಸ್ವಾ ಧೀನದಲ್ಲಿದ್ದೆವು ಎಂದು

ನುಡಿಯುತ್ತಾರೆ. ಪ್ರತಿವಾದಿಯ ತಂದೆ ಮೃತರಾದ ನಂತರ ಪ್ರತಿವಾದಿ ಸದರಿ ಜಮಿನೀನ ಹಕ್ಕು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾನು ಮತ್ತು ಪ್ರತಿವಾದಿ ಇಬ್ಬರೂ ಹಕ್ಕು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ಪ್ರತಿವಾದಿಯ ತಂದೆ ಮೇಲ್ಕಂಡ ಜಮೀನನ್ನು ಒಟ್ಟಾಗಿ ಖರಿಸಿದಿಸಿದ ಬಗ್ಗೆ ದಾಖಲೆಗಳು ಇಲ್ಲ. ಪ್ರತಿವಾದಿಯ ತಂದೆ ಮೇಲ್ಕಂಡ ಜಮೀನನ್ನು ಖರೀದಿಸಿದ ನಂತರ ಒಂದು ದನದ ಮನೆ ಹಾಗೂ ಒಂದು ವಾಸದ ಮನೆ ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಕಾಳೇಗೌಡರು ಒಂದು ಮನೆ ನಿರ್ಮಿಸಿದ್ದು ನಾವು ಒಂದು ಮನೆ ನಿರ್ಮಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಸದರಿ ಜಮೀನಿನಲ್ಲಿ ಮನೆಯನ್ನು ನಿರ್ಮಿಸಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ಸದರಿ ಎರಡು ಮನೆಗಳ ಪೈಕಿ ಪಶ್ಚಿಮ ದಿಕ್ಕಿನಲ್ಲಿರುವ ಮನೆಯಲ್ಲಿ ಪ್ರತಿವಾದಿ ವಾಸವಾಗಿದ್ದಾರೆ ಎಂದರೆ ಸರಿ. ನಾನು ಪೂರ್ವ ದಿಕ್ಕಿಗೆ ಇರುವ ಮನೆಯ ಮೇಲೆ ಈ ದಾವೆ ಹೂಡಿರುತ್ತೇನೆ ಎಂದರೆ ಸರಿ. ಸದರಿ ಎರಡು ಮನೆಗಳು ಅಕ್ಕ ಪಕ್ಕ ಇವೆ ಎಂದರೆ ಸರಿ. ಸಾಕ್ಷಿಯು ಎರಡೂ ಮನೆಗಳ ನಡುವೆ 3 ಅಡಿ ಜಾಗ ಇದೆ ಎಂದು ನುಡಿಯುತ್ತಾರೆ. ಪೂರ್ವ ದಿಕ್ಕಿಗೆ ಇರುವ ಮನೆಗೆ ನಾನು ಜುಲೈ 2020 ರಲ್ಲಿ ಉಡಾಫೆಯಿಂದ ಸೇರಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾವು 40 ವರ್ಷಗಳ ಹಿಂದೆ ಕಟ್ಟಿರುತ್ತೇವೆ ಎಂದು ನುಡಿಯತ್ತಾರೆ.

ನಾನು ಉಡಾಫೆಯಿಂದ ಮನೆಗೆ ಸೇರಿಕೊಂಡ ಬಗ್ಗೆ ಪಂಚಾಯತಿ ನಡೆಯಿತು ಎಂದರೆ ಸರಿ. ನಾನು ಪಂಚಾಯತಿದಾರರ ತೀರ್ಮಾನಕ್ಕೆ ಒಪ್ಪಲಿಲ್ಲ ಎಂದರೆ ಸರಿಯಲ್ಲ. ಆ ಸಂಬಂದ ಪ್ರತಿವಾದಿ ಪೋಲಿಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸಾಕ್ಷಿಯು ನಾನೇ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದೂರು ಕೊಟ್ಟ ಬಗ್ಗೆ ದಾಖಲೆಗಳು ಇವೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ.

ನಾನು ಮನೆ ನಿರ್ಮಿಸಿರುವ ಬಗ್ಗೆ ಪಂಚಾಯತಿಯಿಂದ ಪರವಾನಿಗೆಯನ್ನು 40 ವರ್ಷಗಳ ಹಿಂದೆ ನನ್ನ ತಂದೆ ಪಡೆದಿರುತ್ತಾರೆ. ಸದರಿ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಮ್ಮ ತಂದೆ 40 ಇಂಟು 60 ವಿಸ್ತೀರ್ಣಕ್ಕೆ ಪರವಾನಿಗೆ ಪಡೆದಿರುತ್ತಾರೆ. ಪಂಚಾಯತಿಯಲ್ಲಿ 40 ಇಂಟು 60 ರ ವಿಸ್ತೀರ್ಣಕ್ಕೆ ಖಾತೆ ಮಾಡಿಸಿರುತ್ತೇನೆ. ಸದರಿ ಖಾತೆ ಮಾಡಿಸಿದ ಸಂಬಂದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಪ್ರಕರಣದ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಈ ಪ್ರಕರಣಕ್ಕಿಂತ ಮುಂಚೆ ನನ್ನ ತಾಯಿಯವರು ದಾವೆ ಹೂಡಿರುವ ವಿಚಾರ ನನಗೆ ಗೊತ್ತು. ನನ್ನ ತಾಯಿ 2017 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿಯವರು 2016 ರಲ್ಲಿ ದಾವೆ ಹೂಡಿದ್ದರು. ನನ್ನ ತಾಯಿಯವರು ಕಿರುಕುಳ ಕೊಡುತಿದ್ದರಿಂದ ದಾವೆಯನ್ನು ಹೂಡಿದ್ದರು. ನನ್ನ ತಾಯಿಯವರು ಏನು ಬರೆಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ.

ನನ್ನ ತಾಯಿಯವರು ಪ್ರತಿವಾದಿಯ ವಿರುದ್ದ ಈ ದಾವಾ ಆಸ್ತಿಗೆ ಸಂಬಂದಿಸಿದಂತೆ ದಾವೆ ಹೂಡಿದ್ದರು. ಸದರಿ ದಾವಾ ಸಂ. 12/2017 ಎಂದರೆ ಸರಿ. ನನ್ನ ತಾಯಿಯವರು ಸರ್ಕಾರದಿಂದ

ಮಂಜೂರದ ಆಸ್ತಿ ಎಂದು ಬರೆಸಿದ್ದಾರೆ ಎಂದರೆ ಸರಿ. ಸದರಿ ಆಸ್ತಿ ಪಿ ಚಾಕನಹಳ್ಳಿ ಗ್ರಾಮ ಪಂಚಾಯತಿಗೆ ಸೇರಿದ ಆಸ್ತಿ ಎಂದು ಬರೆಸಿದ್ದಾರೆ ಎಂದರೆ ಸರಿ. ಸದರಿ ಜಾಗ ಪಿ ಚಾಕನಹಳ್ಳಿ ಗ್ರಾಮದಲ್ಲಿ ಇದ್ದ ಮನೆ ಸರ್ವೆ ನಂಬರ್ ನಲ್ಲಿ ಬರುತ್ತದೆ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳು ಗ್ರಾಮ ಠಾಣಾಕ್ಕೆ ಸಂಬಂದಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ-1 ರಿಂದ 5 ರಲ್ಲಿ ಚೆಕ್ಕುಬಂದಿಯನ್ನು ಬರೆಸಿಲ್ಲ ಎಂದರೆ ಸರಿ. ನಿಪಿ 1 ರಿಂದ 5 ಈ ದಾವಾ ಆಸ್ತಿಗೆ ಸಂಬಂದಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಈ ಪ್ರಕರಣಕ್ಕೆ ಸಂಬಂದಿಸದೇ ಇದ್ದರೂ ಸುಳ್ಳು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.ನನ್ನ ತಾಯಿ ಗ್ರಾಮ ಠಾಣಾದ ಆಸ್ತಿಯೆಂದು ದಾವೆ ಸಲ್ಲಿಸಿದ್ದು ನಂತರ ಅದನ್ನು ವಾಪಸ್ಸು ತೆಗೆದುಕೊಂಡರು ಎಂದರೆ ಸಾಕ್ಷಿಯು ನನ್ನ ತಾಯಿಯ ಅನಾರೋಗ್ಯದಿಂದ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿ ದಾವೆಯನ್ನು ವಜಾ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರ ಗೊತ್ತಿದ್ದರೂ ಗ್ರಾಮ ಠಾಣದ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ಸುಳ್ಳು ಚೆಕ್ಕುಬಂದಿಯನ್ನು ನೀಡಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ಸೇರಿದ ಮನೆಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಿಸ್ತೀರ್ಣ ಮನೆ ಮತ್ತು ಜಾಗ ಪ್ರತಿವಾದಿಯ ತಂದೆ ಖರೀದಿಸಿದ ಸರ್ವೆ ನಂಬರ್‌ನಲ್ಲಿದೆ ಎಂದರೆ ಸಾಕ್ಷಿಯು ಒಟ್ಟಾಗಿ ಖರೀದಿಸಿದ ಆಸ್ತಿಯೆಂದು ಮತ್ತು ಸದರಿ ಜಮೀನನ್ನು ಮಾರಾಟ ಮಾಡಿದ ವ್ಯಕ್ತಿಯ ಹೆಸರಿನಲ್ಲಿ ಆಸ್ತಿಯ ಖಾತೆ ಇದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯಿಂದ ಅಥವಾ ಅವರ ತಂದೆಯಿಂದ ಕ್ರಯ ಪತ್ರವನ್ನು ಬರೆಸಿಕೊಂಡಿಲ್ಲ ಅನುಮತಿ ಮೇರೆಗೆ ಮನೆಯನ್ನು ಕಟ್ಟಿಕೊಂಡಿದ್ದೇವೆ . ಸದರಿ ಮನೆಯನ್ನು ಕಟ್ಟುವ ಸಂಬಂದ ದಾಖಲೆಯನ್ನು ಮಾಡಿಸಿಕೊಳ್ಳಲು ನನಗೆ ತೊಂದರೆ ಇತ್ತು. ನಂತರ 6-7 ವರ್ಷಗಳ ಹಿಂದೆ ದಾಖಲೆಯನ್ನು ಬರೆದುಕೊಡುವಂತೆ ಪ್ರತಿವಾದಿಯನ್ನು ಕೇಳಿದ್ದೆ. ಆ ಸಂಬಂದ ನಾನು ಪ್ರತಿವಾದಿಗೆ ಲಿಖಿತ ನೋಟೀಸು ಕೊಟ್ಟಿಲ್ಲ, ನ್ಯಾಯ ಪಂಚಾಯತಿಯಲ್ಲಿ ಕೇಳಿದ್ದೆ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ ಮುಂಚೆ ಪ್ರತಿವಾದಿಗೆ ನೋಟೀಸು ಕೊಟ್ಟಿರುತ್ತೇವೆ. ಸದರಿ ನೋಟೀಸನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ಪ್ರತಿವಾದಿ ನನಗೆ ಅಕ್ರಮವಾಗಿ ಮನೆಯನ್ನು ಕಟ್ಟಿಕೊಂಡಿದ್ದು ಅದನ್ನು ಖಾಲಿ ಮಾಡುವಂತೆ ನೋಟೀಸನ್ನು ಕೊಟ್ಟಿಲ್ಲ. ಸದರಿ ನೋಟಿಸಿಗೆ ನಾನು ನನ್ನ ವಕೀಲರ ಮುಖಾಂತರ ಪ್ರತ್ಯುತ್ತರ ನೀಡಿದ್ದೇನೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ , ಸ್ವಾಮಿಗೌಡರ ಮನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖಾಲಿ ಮಾಡಬೇಕಾಗುತ್ತದೆ ಎಂದು ಈ ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯನ್ನು ಖಾಲಿ ಮಾಡುವಂತೆ ಪ್ರತಿವಾದಿ ನನ್ನ ವಿರುದ್ಧ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ, ನಾನು ಆ ದಾವೆಯಲ್ಲಿ ದಾಖಲೆಗಳನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು